## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

## ಸಿ.ಸಿಃ 315/2015

| | | | |
|---|---|---|---|
| ಸಾಕ್ಷಿದಾರರ ಹೆಸರು | | ತೋಪಯ್ಯ | ಪ್ರಾ.ಸಾಃ 6 |
| ತಂದೆಯ/ಗಂಡನ ಹೆಸರು | | ಕೆಂಪಯ್ಯ | ಚಾಸಾಃ 3 |
| ವಯಸ್ಸು | | 53 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಕಾಳಿಹುಂಡಿ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು | ದಿಃ 17.04.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ 1 ಮತ್ತು 2 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತಿಲ್ಲ. ಆರೋಪಿತರು ಮತ್ತು ಚಾಸಾ 1 ಹಾಗೂ 2 ರವರ ನಡುವೆ ನಡೆದ ಗಲಾಟೆಯನ್ನು ನಾನು ನೋಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತರ ಮೇಲೆ ಯಾವ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಕುರಿತು ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

( ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

ದಿನಾಂಕ 29.09.2014 ರಂದು ನಾನು ನನ್ನ ಕೆಲಸದ ನಿಮಿತ್ತ ಮೈಸೂರಿಗೆ ಹೋಗಿದ್ದು, ಕೆಲಸ ಮುಗಿಸಿಕೊಂಡು ಸಂಜೆ 04.15 ರ ಸಮಯಕ್ಕೆ ನಾನು ನಮ್ಮ ಊರಿಗೆ ಹೋಗಲು ಮಾರ್ಗ ಸಂಖ್ಯೆ 240/1 ರ ಬಸ್ಸನ್ನು ಹತ್ತಿದ್ದು, ಸದರಿ ಬಸ್ಸಿನ ಮುಂಭಾಗದ 3 ನೇ ಸೀಟಿನಲ್ಲಿ ಕುಳಿತಿದ್ದೆನು ಎಂದರೆ ಸರಿಯಲ್ಲ. ಸಂಜೆ 05.30 ಕ್ಕೆ ಸದರಿ ಬಸ್ಸು ಇಬ್ಜಾಲ ಗ್ರಾಮದಲ್ಲಿ ಹೋಗುತ್ತಿದ್ದಾಗ ರಸ್ತೆ ಕಿರಿದಾಗಿದ್ದ ಕಾರಣ, ಬಸ್ಸು ನಿಧಾನವಾಗಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಎದುರುಗಡೆಯಿಂದ ಒಬ್ಬರು ಎತ್ತುಗಳನ್ನು ಹೊಡೆದುಕೊಂಡು

ಬರುತ್ತಿದ್ದದನ್ನು ನೋಡಿ ಚಾಸಾ1 ಬಸ್ಸನ್ನು ನಿಲ್ಲಿಸಿದ್ದು, ಎತ್ತುಗಳನ್ನು ಹೊಡೆದುಕೊಂಡು ಬರುತ್ತಿದ್ದವರು ಬಸ್ಸಿನ ಪಕ್ಕದಲ್ಲೇ ನಿಧಾನವಾಗಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆಗ ಅಲ್ಲಿ ನಿಂತಿದ್ದಂತಹ ಚಾಸಾ 1 ರವರಿಗೆ ಬೋಳಿ ಮಗನೇ, ಎತ್ತುಗಳು ಬರುವುದು ನಿನಗೆ ಕಾಣಿಸಲಿಲ್ಲವಾ, ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ 1 ರಸ್ತೆ ಕಿರಿದಾಗಿದ್ದು, ಬಸ್ಸನ್ನು ನಿಲ್ಲಿಸಿದ್ದೀನಲ್ಲ, ಎತ್ತಿನ ಕಡೆಯವರೇ ಅವರಷ್ಟಕ್ಕೆ ಎತ್ತುಗಳನ್ನು ಹೊಡೆದುಕೊಂಡು ಹೋಗಿದ್ದು, ನೀನೇಕೆ ಅದರ ಬಗ್ಗೆ ನನಗೆ ಬೈಯುತ್ತಿಯಾ ಎಂದಿದ್ದಕ್ಕೆ ಸದರಿ ವ್ಯಕ್ತಿ ಏಕಾಏಕಿ ಬಸ್ಸಿನ ಮುಂಭಾಗದಿಂದ ಬಸ್ಸಿನ ಒಳಕ್ಕೆ ಬಂದು, ಚಾಸಾ 1 ರವರಿಗೆ ಬೋಳಿ ಮಗನೇ, ನನಗೆ ಎದುರು ಮಾತನಾಡುತ್ತೀಯಾ ಎಂದು ಆತನ ಕತ್ತಿನ ಪಟ್ಟಿ ಹಿಡಿದು ಎಳೆದಾಡುತ್ತಾ ಇದ್ದಾಗ, ಅದೇ ಬಸ್ಸಿನಲ್ಲಿ ಪ್ರಯಾಣ ಮಾಡಿಕೊಂಡು ಬರುತ್ತಿದ್ದ ಇನ್ನಿಬ್ಬರು ಚಾಲಕನಿಗೆ ಹೊಡೆಯುತ್ತಿದ್ದವನೊಂದಿಗೆ ಸೇರಿಕೊಂಡು ಅವರು ಕೂಡ ಕೈಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಬಸ್ಸಿನಲ್ಲಿದ್ದ ಚಾಸಾ 2 ರವರು ಸಮಾಧಾನ ಪಡಿಸಲು ಹೋದಾಗ ಅವರಲ್ಲಿ ಒಬ್ಬ ಚಾಸಾ 2 ರವರ ನ್ಯಾಯಾಲಯದ ಮುಂದಿರುವ ಸಮವಸ್ತ್ರದ ಅಂಗಿಯನ್ನು ಹಿಡಿದು ಎಳೆದಾಗಿ ಅವರಿಗೂ ಕೈಗಳಿಂದ ಒಂದೆರಡು ಏಟು ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಬಸ್ಸಿನಲ್ಲಿದ್ದ ಕೆಲವರು ಸಮಾಧಾನಪಡಿಸಿದಾಗ ಗಲಾಟೆ ಮಾಡಿದವರು ಬಸ್ಸಿನಿಂದ ಇಳಿದು ಹೋದರು ಎಂದರೆ ಸರಿಯಲ್ಲ. ನಂತರ ಚಾಲಕನ ಹೆಸರು ನಾಗರಾಜು ಎಂದು, ನಿರ್ವಾಹಕನ ಹೆಸರು ಸತೀಶ ಎಂದು ತಿಳಿಯಿತು ಎಂದರೆ ಸರಿಯಲ್ಲ. ಗಲಾಟೆಯಲ್ಲಿ ಚಾಸಾ 2 ರವರ ಜೇಬಿನಲ್ಲಿದ್ದ ರೂ. 2,000/- ಮತ್ತು ಚಾಸಾ 1 ರವರ ಕತ್ತಿನಲ್ಲಿದ್ದ ಸುಮಾರು 28 ಗ್ರಾಂ ಚಿನ್ನದ ಚೈನು ಅಲ್ಲಿಯೇ ಬಿದ್ದು ಹೋಗಿದೆ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ 2 ರವರ ನ್ಯಾಯಾಲಯದ ಮುಂದಿರುವ ಸಮವಸ್ತ್ರದ ಅಂಗಿಯ ಬಲಭಾಗದ ಜೇಬು ಹರಿದಿತ್ತು ಎಂದರೆ ಸರಿಯಲ್ಲ. ಚಾಸಾ 1 ರವರು ನನಗೆ ಎದೆಗೆ ಮತ್ತು ತಲೆಗೆ ಒತ್ತಿದ್ದರಿಂದ ನೋವಾಗಿದೆ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರೇ ಸದರಿ ದಿನದಂದು ಚಾಸಾ 1 ಮತ್ತು 2 ರವರ ಮೇಲೆ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 13.12.2014

ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ಆರೋಪಿಗೆ ಈ ಪ್ರಕರಣದಿಂದ ಬಚಾವು ಮಾಡುವ ಸಲುವಾಗಿ ಹಾಗೂ ಅವರಿಗೆ ಶಿಕ್ಷೆಯಾಗುವುದನ್ನು ತಪ್ಪಿಸುವ ಸಲುವಾಗಿ ಎಲ್ಲಾ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**<u>ಪಾಟೀ ಸವಾಲು ಶ್ರೀ ವಕೀಲರಿಂದ ಆರೋಪಿ ಪರವಾಗಿಃ ಏನು ಇಲ್ಲಾ</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**